## ರಮಾ! ಹೇಗಿದ್ದೀಯಾ ರಮಾ?

ನೀನು ಮತ್ತು ಯಶವಂತ್ ಇಂದು ಪದೇ ಪದೇ ನೆನಪಾಗುತ್ತಿದ್ದೀರಿ. ನಿಮ್ಮ ನೆನಪಾಗುತ್ತಲೇ ಹೃದಯ ಭಾರವಾಯಿತು. ಕೆಲವು ದಿನಗಳಿಂದ ನಾನಿಲ್ಲಿ ಮಾಡುತ್ತಿರುವ ಭಾಷಣಗಳು ಬಹಳ ಚರ್ಚೆಯಾದವು. ಸಮ್ಮೇಳನದಲ್ಲಿ ಬಹಳ ಒಳ್ಳೆಯ ಮತ್ತು ಪರಿಣಾಮಕಾರಿ ಭಾಷಣಗಳಿದ್ದವು ಎಂದು ನನ್ನ ಭಾಷಣದ ಬಗ್ಗೆ ಇಲ್ಲಿನ ಪತ್ರಿಕೆಗಳು ಬರೆಯುತ್ತಿವೆ. ದುಂಡು ಮೇಜಿನ ಸಮ್ಮೇಳನದಲ್ಲಿ ನನ್ನ ಪಾತ್ರವೇನು ಎಂದು ಪ್ರಶ್ನಿಸಿಕೊಂಡಾಗಲೆಲ್ಲ, ನನ್ನ ದೇಶದ ಬಲಿಪಶು ಜನರು ನನ್ನ ಕಣ್ಣಮುಂದೆ ಕಾಣುತ್ತಿದ್ದರು. ಸಾವಿರಾರು ವರ್ಷಗಳಿಂದ ನಮ್ಮ ಜನರು ಸಂಕೋಲೆಯಲ್ಲಿ ಬೇಯುತ್ತಿದ್ದಾರೆ. ಅವರ ಮೇಲಿನ ತುಳಿತಕ್ಕೆ ಎಣೆಯಿಲ್ಲದಂತಾಗಿದೆ ಎಂದು ನಾನು ಭಾಷಣದಲ್ಲಿ ಹೇಳಿದ್ದು ಅವರಿಗೆ ಅರ್ಥವಾಗಿದೆ ಎಂಬುದೇ ನನಗೆ ದೊಡ್ಡ ಆಶ್ಚರ್ಯ. ಆದರೆ, ನಾನು ನನ್ನ ಹೋರಾಟವನ್ನು ಇಲ್ಲಿಗೆ ಕೈ ಬಿಡುವುದಿಲ್ಲ ರಮಾ.

ಬೇರೆ ಬೇರೆ ಆಲೋಚನೆಗಳೆಲ್ಲ ಒಂದರ ಮೇಲೊಂದು ಹಿಂಡುತ್ತಿದ್ದರೂ ನನ್ನ ಹೋರಾಟದ ಆಲೋಚನೆಗಳು ಮಾತ್ರ ಮತ್ತಷ್ಟು ಗಟ್ಟಿಯಾಗುತ್ತಿವೆ. ಆದರೆ ನಿಮ್ಮ ನೆನಪಾದರೆ ಹೃದಯ ಮಮ್ಮಲ ಮರುಗುತ್ತದೆ. ತಲೆ ಗೊಂದಲದ ಗೂಡಾಗಿದೆ. ನಿನ್ನ ಮತ್ತು ಮನೆಯವರ ನೆನಪು ಕಾಡುತ್ತಿದೆ. ನೀನು ನೆನಪಾಗುತ್ತಿರುವೆ. ಯಶವಂತ ನೆನಪಾಗುತ್ತಿದ್ದಾನೆ. ಇಲ್ಲಿಗೆ ಸಮ್ಮೇಳನಕ್ಕೆ ಬರುವಾಗ ನನ್ನನ್ನು ಕಳುಹಿಸಲು ನೀನು ಬರುವುದು ಬೇಡ ಎಂದು ನಾನೆಷ್ಟೇ ಹೇಳಿದರೂ ಕೇಳದೆ, ನೀನು ಹಡಗಿನವರೆಗೆ ಬಂದಿದ್ದೆಯಲ್ಲ. ಎಲ್ಲರೂ ನನಗೆ ಶುಭಕೋರುತ್ತಿದ್ದುದನ್ನು ಸುಮ್ಮನೆ ನೋಡುತ್ತಾ ನಿಂತಿದ್ದೆ ನೀನು. ಆಗ ನಿನ್ನ ಹೃದಯ ತುಂಬಿ ಬಂತಿತ್ತು. ಎಲ್ಲರಿಗೂ ಕೃತಜ್ಞತೆ ಸೂಚಿಸುವಂತಿತ್ತು ನಿನ್ನ ನೋಟ. ನೀನು ಮೂಕವಿಸ್ಮಿತಳಾಗಿದ್ದೆ. ನಿನಗೆ ಹೇಳಲಾಗದ್ದನ್ನು ನಿನ್ನ ಕಣ್ಣುಗಳು ಮಾತನಾಡುತ್ತಿದ್ದವು. ಮಾತಿಗೆ ಮೀರಿದ್ದನ್ನು ನಿನ್ನ ಮೌನ ಹೇಳುತ್ತಿತ್ತು. ಗಂಟಲಿನಿಂದ ಹೊಮ್ಮಿದ ಶಬ್ದ ತುಟಿಯನ್ನು ತಾಕಿ ಮಾತಾಗುವ ಬದಲು ಕಣ್ಣನ್ನು ತಾಕಿ ಕಣ್ಣೀರಾಗಿತ್ತು.

ಲಂಡನ್‌ನಲ್ಲಿ ಇವತ್ತು ಬೆಳಗ್ಗೆ ಈ ವಿಷಯವೆಲ್ಲ ನನ್ನ ತಲೆಯಲ್ಲಿ ಸುಳಿಯುತ್ತಿವೆ. ದುಃಖ ಉಮ್ಮಳಿಸಿ ಬರುತ್ತಿದೆ. ಆಲೋಚನೆಗಳಲ್ಲೇ ಬಸವಳಿದು ಹೋಗುತ್ತಿದ್ದೇನೆ ಅನಿಸುತ್ತಿದೆ.

ಹೇಗಿರುವೆ ರಮಾ? ನಮ್ಮ ಯಶವಂತ್ ಹೇಗಿದ್ದಾನೆ? ಅವನು ನನ್ನನ್ನು ನೆನಪು ಮಾಡಿಕೊಳ್ಳುತ್ತಿರುತ್ತಾನಾ? ಅವನ ಸಂಧಿವಾತ ಹೇಗಿದೆ? ಅವನ ಕಾಳಜಿ ವಹಿಸು ರಮಾ. ನಮ್ಮ ನಾಲ್ಕು ಮಕ್ಕಳು ತೀರಿಹೋದರು. ಈಗ ಯಶವಂತ ಮಾತ್ರ ನಮ್ಮ ಪಾಲಿಗೆ ಉಳಿದಿದ್ದಾನೆ. ನಿನ್ನ ತಾಯ್ತನದ ಕುರುಹು ಅವನು. ನಾವು ಅವನನ್ನು ರಕ್ಷಿಸಿಕೊಳ್ಳಲೇಬೇಕು. ರಮಾ, ಯಶವಂತನ ಕಾಳಜಿ ಮಾಡು. ಅವನನ್ನು ಹೆಚ್ಚು ಹೆಚ್ಚು ಓದಿಸು. ರಾತ್ರಿ ಹೊತ್ತು ಓದಲು ಅವನನ್ನು ಎಬ್ಬಿಸು. ನನ್ನ ಅಪ್ಪ, 'ರಾತ್ರಿಯಲ್ಲಿ ಓದು' ಎಂದು ನನ್ನನ್ನು ಎಬ್ಬಿಸುತ್ತಿದ್ದರು. ಅವರೂ ಸಹ ಎದ್ದೇ ಇರುತ್ತಿದ್ದರು. ಅವರು ನನಗೆ ಬದುಕಿನಲ್ಲಿ ಓದಿನ ಶಿಸ್ತು ಕಲಿಸಿದರು. ನಾನು ಎದ್ದು ಓದಿಕೊಳ್ಳಲು ಯಾವಾಗ ಶುರು ಮಾಡುತ್ತಿದ್ದೆನೋ ಆಗಷ್ಟೇ ಅವರು ಮಲಗುತ್ತಿದ್ದರು. ರಾತ್ರಿ ಓದಲು ಎಬ್ಬಿಸಿದಾಗ ಮೊದಮೊದಲು ನಾನು ಆಲಸ್ಯ ತೋರಿಸುತ್ತಿದ್ದೆ. ಆ ರಾತ್ರಿಗಳಲ್ಲೆಲ್ಲ ಓದಿಗಿಂತ ನಿದ್ರೆ ಹೆಚ್ಚು ಇಷ್ಟವಾಗುತ್ತಿತ್ತು. ಆಮೇಲಾಮೇಲೆ ನಿದ್ರೆಗಿಂತ ಜೀವನದಲ್ಲಿ ಓದೇ ನನಗೆ ಬಹಳ ಮುಖ್ಯವಾಯಿತು.

ನನ್ನ ಓದಿನ ಹೆಗ್ಗಳಿಕೆಯೆಲ್ಲ ಬಾಬಾರಿಗೆ ಸಲ್ಲಬೇಕು ರಮಾ. ನನ್ನ ವಿದ್ಯೆಯೆಂಬ ಬೆಳಕನ್ನು ಜೀವಂತವಾಗಿಡಲು ಎಣ್ಣೆಯಂತೆ ಉರಿದರು ಬಾಬಾ. ಕತ್ತಲೆಯಲ್ಲಿ ಬೆಳಕು ಮೂಡಿಸಲು ಅವರ ಕೈಯಲ್ಲಿ ಏನೆಲ್ಲಾ ಸಾಧ್ಯವೋ ಅದನ್ನೆಲ್ಲಾ ಮಾಡಿದರು. ನನ್ನ ಅಪ್ಪನ ಶ್ರಮಕ್ಕೆ ಇಂದು ಫಲ ದೊರಕುತ್ತಿದೆ. ಇವತ್ತು ನನಗೆ ಬಹಳ ಖುಷಿಯಾಗಿದೆ ರಮಾ. ಇದೇ ರೀತಿ ಯಾವಾಗ ಸಹ ಓದಿನಲ್ಲಿ ತೊಡಗಿಕೊಳ್ಳಬೇಕು ರಮಾ. ಪುಸ್ತಕಗಳೆಡೆ ಅವನಿಗೆ ಹೆಬ್ಬಯಕೆ ಹುಟ್ಟಬೇಕು ರಮಾ.

ಐಷಾರಾಮಿ ವಸ್ತುಗಳಿಂದ ಉಪಯೋಗ ಏನಿದೆ, ಹೇಳು ರಮಾ. ಅವುಗಳನ್ನು ತಮ್ಮ ಸುತ್ತ ಇರಿಸಿಕೊಳ್ಳಲು ಜನರು ಅವುಗಳ ಹಿಂದೆ ಬೀಳುತ್ತಾರೆ. ಅವರ ಬದುಕು ಅಲ್ಲಿಂದಲೇ ಆರಂಭವಾಗಿ ಅಲ್ಲೇ ಮುಗಿದುಹೋಗುತ್ತದೆ. ಹೀಗೆ ಬದುಕುವವರ ಜೀವನ ಬದಲಾವಣೆಯನ್ನೇ ಕಾಣುವುದಿಲ್ಲ. ನಮ್ಮ ಬಳಿ ದುಃಖದ ವಿನಃ ಬೇರೇನಿಲ್ಲ. ನಮ್ಮ ಜೊತೆ ಬಡತನ, ದಾರಿದ್ರ್ಯ ಬಿಟ್ಟು ಬೇರೆ ಭಾಗೀದಾರರಿಲ್ಲ. ಸಂಕಷ್ಟಗಳು ಮತ್ತು ಸಮಸ್ಯೆಗಳು ನಮ್ಮನ್ನು

